ದಿನಾಂಕಃ 20–06–2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ವಾದಿ ರವರ ಪರ ಶ್ರೀ ಟಿ ಜಿ ವಕೀಲರಿಂದ,

1) ನನ್ನ ಗಂಡ ತೀರಿಕೊಂಡ ನಂತರ ನಮ್ಮ ಕುಟುಂಬದಲ್ಲಿ ವಿಭಾಗ ಆಗಿರುವುದಿಲ್ಲ. ನನ್ನ ಗಂಡ ಕೇಂದ್ರ ಸರ್ಕಾರದಲ್ಲಿ ಉದ್ಯೋಗಿ ಆಗಿದ್ದರು ಎಂದರೆ ಸರಿ. ನನ್ನ ಗಂಡ ಜೀವಂತ ಅವಧಿಯಲ್ಲಿ ಆರ್ಥಿಕವಾಗಿ ಚೆನ್ನಾಗಿ ಇದ್ದರು ಎಂದರೆ ಸರಿ. ನನ್ನ ಗಂಡ ಜೀವಂತ ಅವಧಿಯಲ್ಲಿ ಎರಡು ಮನೆಗಳನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಎಂದು ಮನೆಯನ್ನು ನಾನು ಖರೀದಿ ಮಾಡಿದ್ದು, ಇನ್ನೊಂದು ಮನೆಯನ್ನು ನನ್ನ ಗಂಡ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಯಾವುದೇ ಕೆಲಸವನ್ನು ಮಾಡುವುದಿಲ್ಲ. ನನಗೆ ಯಾವುದೇ ಸ್ವಂತ ಆದಾಯ ಇರುವುದಿಲ್ಲ.

2) ನನ್ನ ತವರ ಮನೆ ಹಂಪಾಪುರ ಗ್ರಾಮ. ನಮ್ಮ ತಂದೆಗೆ ಒಟ್ಟು ಐದು ಜನ ಮಕ್ಕಳು. ಹಂಪಾಪುರ ಗ್ರಾಮದಲ್ಲಿ ನನ್ನ ತಂದೆಗೆ ಒಂದು ಹಳೆಯ ಮನೆ ಮಾತ್ರ ಇತ್ತು ಎಂದರೆ ಸರಿ. ನನ್ನ ತಂದೆ ಬಡತನದಲ್ಲಿ ಇದ್ದರು ಎಂದರೆ ಸರಿ. ನನ್ನ ಮದುವೆಯನ್ನು ನನ್ನ ಗಂಡ ಖರ್ಚು ಮಾಡಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಿಪಿ–06 ಕ್ರಯ ಪತ್ರದಲ್ಲಿ ಆಸ್ತಿಯನ್ನು ನನ್ನ ಗಂಡ ನನ್ನ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ–06 ಕ್ರಯ ಪತ್ರಕ್ಕೆ ನನ್ನ ಗಂಡ ಸಹಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನನ್ನ ಗಂಡ ಜೀವಂತ ಅವಧಿಯಲ್ಲಿ ಖರೀದಿ ಮಾಡಿರುತ್ತಾರೆ. ನಿಪಿ–06 ಕ್ರಯ ಪತ್ರದಲ್ಲಿ ನಾನು ಚಿನ್ನವನ್ನು ಮಾರಾಟ ಮಾಡಿ ಬಂದ ಹಣದಿಂದ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದು ನಮೂದು ಮಾಡಿರುವುದಿಲ್ಲ.

3) ದಿನಾಂಕ 11/06/2015 ರಂದು ದಾವಾ ಸ್ವತ್ತುಗಳನ್ನು 2 ನೇ ಪ್ರತಿವಾದಿ ಹೆಸರಿಗೆ ದಾನ ಪತ್ರ ಮಾಡಿರುತ್ತೇನೆ ಎಂದರೆ ಸರಿ. ಸದರಿ ದಾನ ಪತ್ರವನ್ನು ಈ ದಾವೆ

ಸಲ್ಲಿಸುವ ಪೂರ್ವದಲ್ಲಿ ರದ್ದು ಮಾಡಿರುತ್ತೇನೆ. ಸದರಿ ರದ್ದು ಮಾಡಿದ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ಮಗ ಹರೀಶ ತೀರಿಕೊಂಡ ನಂತರ ನಿಪಿ-05 ದಾನ ಪತ್ರವನ್ನು ಮಾಡಿರುತ್ತೇನೆ. ನನ್ನ ಗಂಡನ ಹೆಸರಿನಲ್ಲಿ ದಾವಾ ಐಟಂ ನಂ. 3 ಆಸ್ತಿ ಇತ್ತು ಎಂದರೆ ಸರಿ. ಸದರಿ ಸ್ವತ್ತನ್ನು ದಿನಾಂಕ 21/12/2021 ರಂದು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ. ನಾನು 2 ನೇ ಪ್ರತಿವಾದಿ ಹೆಂಡತಿಯ ಪರವಾಗಿ ಸಾಕ್ಷವನ್ನು ನುಡಿಯುತ್ತಿಲ್ಲ. ನಿಪಿ-05 ದಾನಪತ್ರದಲ್ಲಿ ಇರುವ ಆಸ್ತಿಯ ಖಾತೆ 5 ನೇ ಪ್ರತಿವಾದಿ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ನನ್ನ ಗಂಡನ ನಿವೃತ್ತಿ ಹಣವನ್ನು ನಾನು ಪಡೆದುಕೊಂಡಿರುವುದಿಲ್ಲ.

4) ನನ್ನ ಮಗ ಹರೀಶ ಒಟ್ಟು ಕುಟುಂಬದಲ್ಲಿ ಇದ್ದಾಗ ತೀರಿಕೊಂಡಿರುತ್ತಾರೆ ಎಂದರೆ ಸರಿ. ನಾನು ಒಟ್ಟು ಕುಟುಂಬದ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದೆ ಎಂದರೆ ಸರಿ. ಹರೀಶ ತೀರಿಕೊಂಡ ನಂತರ ಅವರಿಗೆ ಬಂದ ಹಣವನ್ನು ನಾನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಹರೀಶ ಜೀವಂತ ಅವಧಿಯಲ್ಲಿ ಕುಟುಂಬದ ಅಭಿವೃದ್ದಿಗಾಗಿ ಸಾಲ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಹರೀಶ ಜೀವಂತ ಅವಧಿಯಲ್ಲಿ ದಾವಾ ಸ್ವತ್ತುಗಳ ಮನೆಯನ್ನು ರೀಪೇರಿ ಮಾಡಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಬೀಮರಾಜ ರವರು ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ.

5) ಆಶಾ ರವರ ಹೆಸರಿನಲ್ಲಿರುವ ಮನೆಯನ್ನು ಆದಾರ ಮಾಡಿ ಸಾಲ ಪಡೆದುಕೂಂಡಿರುತ್ತಾರೆ ಎಂದರೆ ಸರಿ. ಸದರಿ ಸಾಲದ ಹಣವನ್ನು ಮನೆಯ ರಿಪೇರಿಗಾಗಿ ಉಪಯೋಗಿಸಿರುತ್ತಾರೆ. ನನಗೆ 2 ನೇ ಪ್ರತಿವಾದಿ ಹೆಸರಿಗೆ ದಾನ ಪತ್ರ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ನಷ್ಟ ಮಾಡುವ ಉದ್ದೇಶದಿಂದ ಸಾಲ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಹರೀಶ ರವರ ವೈದ್ಯಕೀಯ ಖರ್ಚುಗಳನ್ನು ನಾನು ಭರಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಮೋಸ ಮಾಡಬೇಕೆಂದು ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತೆವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ